# ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ವಾರ್ಷಿಕ ವರದಿಯ ಸಾರಾಂಶ - 2017-2018

ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ **೧೦೯-ನೇ ವಾರ್ಷಿಕ ಸಾಧಾರಣ ಸಭೆಯು** ರವಿವಾರ, ದಿನಾಂಕ ೧೬ನೇ ಡಿಸೆಂಬರ್ ೨೦೧೮ ರಂದು ಮಧ್ಯಾಹ್ನ ೩.೩೦ ಕ್ಕೆ ಬೇಲೂರು ಮಠದಲ್ಲಿ ನೆರವೇರಿತು. ಅದರ ಸಂಕ್ಷಿಪ್ತ ವರದಿ ಈ ಕೆಳಗಿನಂತಿದೆ:

೨೦೧೭-೧೮ರ ಅವಧಿಯಲ್ಲಿ ರಾಮಕೃಷ್ಣ ಮಿಷನ್ ಹಾಗೂ ರಾಮಕೃಷ್ಣ ಮಠ ಹಾಗೂ ಅವುಗಳ ಶಾಖಾಕೇಂದ್ರಗಳಿಗೆ ನೀಡಲಾದ ಪ್ರಧಾನವಾದ ಕೆಲವು ಪ್ರಶಸ್ತಿಗಳು ಹೀಗಿವೆ: ೧) **ರಾಂಚಿ ಮೊರಾಬಾದಿ** ಆಶ್ರಮದ ದಿವ್ಯಾಯನ ಕೃಷಿ ವಿಜ್ಞಾನ ಕೇಂದ್ರಕ್ಕೆ ನವದೆಹಲಿಯಲ್ಲಿರುವ ಭಾರತೀಯ ಕೃಷಿ ಸಂಶೋಧನ ಮಂಡಲಿಯು ರಾಷ್ಟ್ರೀಯ ಹಂತದ **ಪಂಡಿತ್ ದೀನದಯಾಳ ಉಪಾಧ್ಯಾಯ ರಾಷ್ಟ್ರೀಯ ಕೃಷಿ ವಿಜ್ಞಾನ ಪ್ರೋತ್ಸಾಹನ ಪುರಸ್ಕಾರವನ್ನು** ನೀಡಿದೆ. ೨) ಲಂಡನ್ನಿನಲ್ಲಿರುವ **ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್** ನಲ್ಲಿ **ರಾಮಕೃಷ್ಣ ಮಠ** ಹಾಗೂ **ರಾಮಕೃಷ್ಣ ಮಿಷನ್** ಧರ್ಮ ಸಮನ್ವಯಕ್ಕಾಗಿ ದುಡಿಯುವ ಆಧ್ಯಾತ್ಮಿಕ ಚಳುವಳಿ ಎಂದು ದಾಖಲಿಸಿದೆ. ೩) **ಕಾಮಾರಪುಕುರ** ಶಾಲೆ ಹಾಗು **ನರೇಂದ್ರಪುರ** ವಿದ್ಯಾಲಯವು ಪಶ್ಚಿಮ ಬಂಗಾಳ ಸರ್ಕಾರದ ಶಾಲೆ ಹಾಗೂ ಶಿಕ್ಷಣ ವಿಭಾಗದ ವತಿಯಿಂದ **ಅತ್ಯುತ್ತಮ ಶಾಲೆ ಪ್ರಶಸ್ತಿಯನ್ನು** ಗಳಿಸಿವೆ. ೪) ಅಖಿಲ ಭಾರತ ಸ್ವಚ್ಛತಾ ರ್‍ಯಾಂಕಿಂಗ್‌ನಲ್ಲಿ **ಚೆನ್ನೈ ವಿದ್ಯಾಪೀಠದ** ವಿವೇಕಾನಂದ ಕಾಲೇಜು ಮೂರನೆಯ ಸ್ಥಾನವನ್ನು ಗಳಿಸಿದೆ.

**ಸ್ವಾಮಿ ಅಭೇದಾನಂದರ ೧೫೦ನೇ ಜನ್ಮ ಶತಮಾನೋತ್ಸವದ** ಅಂಗವಾಗಿ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ವಿವಿಧ ಶಾಖಾಕೇಂದ್ರಗಳಲ್ಲಿ *'ಭಾರತೀಯ ಸಂಸ್ಕೃತಿ ಹಾಗೂ ತತ್ತ್ವಶಾಸ್ತ್ರ'* ಎಂಬ ವಿಷಯವನ್ನು ಕುರಿತ ನಾಲ್ಕು ರಾಷ್ಟ್ರೀಯ ವಿಚಾರ ಸಂಕಿರಣಗಳು ಹಾಗೂ ಇನ್ನಿತರ ಹಲವು ಕಾರ್ಯಕ್ರಮಗಳು ನಡೆದವು.

**ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಶತಮಾನೋತ್ಸವವನ್ನು** ಬೇಲೂರು ಮಠದ ಪ್ರಧಾನಕೇಂದ್ರದಲ್ಲಿ ಹಾಗೂ ಇನ್ನಿತರ ಅನೇಕ ಶಾಖಾಕೇಂದ್ರಗಳಲ್ಲಿ ಆಚರಿಸಲಾಯಿತು. ಈ ಸಂಬಂಧವಾಗಿ ನಡೆದ ೧೧೫ ವಿಚಾರ ಸಂಕಿರಣಗಳಲ್ಲಿ ಸುಮಾರು ೫೫,೦೦೦ ಮಂದಿ ಪಾಲ್ಗೊಂಡಿದ್ದರು, ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ೫೦,೦೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಭಾಷೆಗಳಲ್ಲಿ ಸೋದರಿ ನಿವೇದಿತಾ ಕುರಿತು ಹೊಸ ಪುಸ್ತಕಗಳು ಕೂಡ ಪ್ರಕಟಗೊಂಡವು.

ರಾಮಕೃಷ್ಣ ಮಿಷನ್ನಿನ ಈ ಕೆಲವು ಹೊಸ ಶಾಖಾಕೇಂದ್ರಗಳು ಆರಂಭಗೊಂಡವು: ೧) **ಗೋವಾ** ೧) **ಲಮ್‌ಡಂಗ್**, ಅರುಣಾಚಲ ಪ್ರದೇಶ, ೩) **ಝೂರ್‌ಗ್ರಾಮ**, ಪಶ್ಚಿಮ ಬಂಗಾಳ ೪) **ನ್ಯೂ ಟೌನ್**, ಕೊಲ್ಕತ್ತಾ ೫) **ದಾವಣಗೆರೆ**, ಕರ್ನಾಟಕ ಹಾಗೂ ೬) **ದಿಬ್ರೂಘರ್**, ಅಸ್ಸಾಂ. ಉತ್ತರ ಪ್ರದೇಶದ **ಅಯೋಧ್ಯೆ**ಯಲ್ಲಿ ಲಕ್ನೋ ಮಿಷನ್ ಸೇವಾಶ್ರಮದ ಉಪ-ಶಾಖಾಕೇಂದ್ರವನ್ನು ಆರಂಭಿಸಲಾಯಿತು.

**ಶೈಕ್ಷಣಿಕ ಕ್ಷೇತ್ರದಲ್ಲಿ** ಈ ಕೆಳಗಿನ **ಹೊಸ ಪ್ರಗತಿಗಳು** ಉಲ್ಲೇಖನೀಯ:

(೧) NAAC ಸಂಸ್ಥೆಯು **ಕೊಯಮತ್ತೂರು ಮಿಷನ್** ಕೇಂದ್ರದ ಕಾಲೇಜ್ ಆಫ್ ಎಜುಕೇಶನ್‌ಗೆ A++ ಹಾಗೂ **ಚೆನ್ನೈ ವಿದ್ಯಾಪೀಠಕ್ಕೆ** A+ ಸ್ಥಾನವನ್ನು ನೀಡಿತು. ೨) UGC ಸಂಸ್ಥೆಯು **ರಹರಾ** ಕೇಂದ್ರದ ವಿವೇಕಾನಂದ ಸೆಂಟನರಿ ಕಾಲೇಜಿಗೆ ಸ್ವಾಯತ್ತ ಸ್ಥಾನವನ್ನು ಆರು ವರ್ಷಗಳ ಕಾಲ ನೀಡಿತು. ೩) **ವಿಶಾಖಪಟ್ಟಣಂ** ಕೇಂದ್ರವು ಪ್ರಧಾನವಾಗಿ ಯುವಜನತೆಗೆ ಜೀವನೋನ್ನತಿ ತರಗತಿಗಳನ್ನು ನಡೆಸುವ *ವಿವೇಕ್ ಇನ್‌ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್* ಅನ್ನು ಆರಂಭಿಸಿದೆ. ೪) **ಕೊಯಮತ್ತೂರು, ವಿಜಯವಾಡ** ಹಾಗೂ **ವಿಶಾಖಪಟ್ಟಣಂ** ಕೇಂದ್ರಗಳು ತಮ್ಮ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್‌ರೂಂ ಸೇವೆಯನ್ನು ಆರಂಭಿಸಿವೆ.

**ವೈದ್ಯಕೀಯ ಕ್ಷೇತ್ರದಲ್ಲಿ** ಈ ಕೆಳಗಿನ **ಹೊಸ ಬೆಳವಣಿಗೆಗಳು** ಉಲ್ಲೇಖನೀಯ:

(೧) **ಇಟಾನಗರ** ಕೇಂದ್ರವು ನಾಲ್ಕು ಹೊಸ ವಿಭಾಗಗಳನ್ನು ಆರಂಭಿಸಿತು: Oncology, ಪ್ಲಾಸ್ಟಿಕ್ ಸರ್ಜರಿ, ಕಾರ್ಡಿಯಾಲಜಿ ಹಾಗೂ ಆಯುರ್ವೇದ.(೨) NABH (National Accreditation Board for Hospitals & Healthcare Providers) ಸಂಸ್ಥೆಯು **ಲಕ್ನೋ** ಕೇಂದ್ರದ ಆಸ್ಪತ್ರೆಗೆ ಮೂರು ವರ್ಷಗಳ ಅವಧಿಗೆ ಅಂಗೀಕಾರ ನೀಡಿದೆ. ೩) **ವೃಂದಾವನ** ಕೇಂದ್ರದ ಆಸ್ಪತ್ರೆಯಲ್ಲಿ ಕಾರ್ಡಿಕ್ ಕ್ಯಾಥೆಟರೈಸೇಶನ್ ಲ್ಯಾಬೋರೇಟರಿ ಮತ್ತು ಕ್ಯಾನ್ಸರ್ ಸೆಂಟರ್‌ಗಳನ್ನು ಆರಂಭಿಸಲಾಯಿತು. ೪) **ವಾರಣಾಸಿ ಹೋಮ್ ಆಫ್ ಸರ್ವಿಸ್**‌ನಲ್ಲಿ ಡೆಂಟಲ್ ಹಾಗೂ ಡಯಾಲಿಸಿಸ್ ಕೇಂದ್ರಗಳನ್ನು ಹಾಗೂ ಒಂದು ಔಷಧಾಲಯವನ್ನು ಆರಂಭಿಸಲಾಯಿತು. ೫) ನಮ್ಮ ಹಲವು ಆಸ್ಪತ್ರೆಗಳು ಮತ್ತು ಔಷಧಕೇಂದ್ರಗಳಲ್ಲಿ ಆಯಾ ಡಯಾಗ್ನಸ್ಟಿಕ್ ಲ್ಯಬೋರೇಟರಿಗಳಲ್ಲಿ ಹೊಸ **ಮೆಡಿಕಲ್ ಇಕ್ವಿಪ್‌ಮೆಂಟ್**‌ಗಳನ್ನು ಸೇರಿಸಲಾಗಿದೆ.

### ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಈ ಕೆಳಗಿನ **ಹೊಸ ಯೋಜನೆಗಳು** ಉಲ್ಲೇಖನೀಯ:

(೧) **ಚೆನ್ನೈ ಸ್ಟುಡೆಂಟ್ಸ್ ಹೋಮ್** ತಮಿಳುನಾಡಿನ ತಿರುವಳ್ಳುವರ್ ಜಿಲ್ಲೆಯ ಪೂವಲಂಬೇಡು ಗ್ರಾಮದಲ್ಲಿ ಒಂದು ಸಾರ್ವಜನಿಕ ಭವನವನ್ನು ನಿರ್ಮಿಸಿಕೊಟ್ಟಿದೆ. ೨) **ರಾಂಚಿ ಮೊರಾಬಾದಿ** ಕೇಂದ್ರವು ೬೯೬ ಹೆಕ್ಟೇರ್ ಪ್ರದೇಶಗಳಲ್ಲಿ ನೀರಿನ ಶೆಡ್‌ಗಳನ್ನು ನಿರ್ಮಿಸಿದೆ. ಸುಗಂಧಭರಿತವಾದ ಅಕ್ಕಿಯ ಸಂರಕ್ಷಣೆಗಾಗಿ ಎರಡು ಯೋಜನೆಗಳನ್ನೂ ಈ ಕೇಂದ್ರವು ಆರಂಭಿಸಿದೆ. ರೈತರಿಗೆ ತರಬೇತಿ ನೀಡಿ ಭತ್ತದ ಬಿತ್ತನೆಯನ್ನು ಉತ್ಪಾದಿಸುವ 'ಗ್ರಾಮ ಬಿತ್ತನೆ ಕಾರ್ಯಕ್ರಮ'ವನ್ನೂ ಈ ಕೇಂದ್ರ ಆರಂಭಿಸಿದೆ. ಈ ಕಾರ್ಯಕ್ರಮದಲ್ಲಿ ೨೫ ಗ್ರಾಮಗಳಿಂದ ಬಂದ ರೈತರು ಭಾಗವಹಿಸಿ, ೧೦೨೫ ಕ್ವಿಂಟಾಲ್ ಭತ್ತದ ಬಿತ್ತನೆಯನ್ನು ಉತ್ಪಾದಿಸಿದರು.

ಹಲವಾರು ಶಾಖಾಕೇಂದ್ರಗಳು *ಸ್ವಚ್ಛ ಭಾರತ ಅಭಿಯಾನ*ವನ್ನು ಸ್ವಚ್ಛತಾ ಕಾರ್ಯಕ್ರಮ ಹಾಗೂ ಅರಿವು ನೀಡುವ ಕಾರ್ಯಕ್ರಮಗಳೊಂದಿಗೆ ಮುಂದುವರೆಸಿವೆ. ಅವುಗಳಲ್ಲಿ ವಿಶೇಷ ಉಲ್ಲೇಖ ಮಾಡಬೇಕಾದದ್ದು — **ಮಂಗಳೂರು** ಆಶ್ರಮವು ಈ ಕೆಳಗಿನ ಕಾರ್ಯಗಳನ್ನು ನಡೆಸಿತು: ೧) ಮಂಗಳೂರು ನಗರದ ಸುತ್ತಮುತ್ತ ೧೮೪ ಸ್ವಚ್ಛತಾ ಕಾರ್ಯಕ್ರಮಗಳು. ೨) ದಕ್ಷಿಣ ಕನ್ನಡ ಜಿಲ್ಲೆಯ ೩೩೨ ಹಳ್ಳಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳು. ೩) ೧೧೦ ಶಾಲೆಗಳಲ್ಲಿ ೪೨೬ ಅರಿವು ನೀಡುವ ಕಾರ್ಯಕ್ರಮಗಳು; ಇದರಲ್ಲಿ ೪೪,೦೦೦ ವಿದ್ಯಾರ್ಥಿಗಳು ಪಾಲ್ಗೊಂಡರು.

### ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೊಸ ಯೋಜನೆಗಳು ಉಲ್ಲೇಖನೀಯ:

೧) **ಆಂಟ್‌ಪುರ್** ಹಾಗೂ **ನಾಗಪುರ** ಕೇಂದ್ರಗಳಲ್ಲಿ ಹೊಸ ಡಿಸ್ಪೆನ್ಸರಿ ಕಟ್ಟಡಗಳ ನಿರ್ಮಾಣ. ೨) **ಕೂಚ್‌ಬಿಹಾರ್** ಮತ್ತು **ರಾಜ್‌ಕೋಟ್** ಕೇಂದ್ರಗಳು ತಮ್ಮ ವೈದ್ಯಕೀಯ ಘಟಕದಲ್ಲಿ ಹೊಸ ಮಹಡಿಯೊಂದನ್ನು ಸೇರಿಸಿವೆ. ೩) **ನಟ್ಟರಾಂಪಳ್ಳಿ** ಕೇಂದ್ರವು ಶಾಲಾ ಕಟ್ಟಡದಲ್ಲಿ ಹೊಸ ಸಂಕೀರ್ಣವನ್ನು ನಿರ್ಮಿಸಿದೆ. ೪) **ಬಾಗ್ದಾ** ಕೇಂದ್ರದಲ್ಲಿ ಕೋಚಿಂಗ್ ಹಾಗೂ ವೊಕೇಶನಲ್ ತರಬೇತಿ ಕೇಂದ್ರನ್ನು ಆರಂಭಿಸಲಾಗಿದೆ.

### ಭಾರತದ ಹೊರಗೆ ಈ ಕೆಳಗಿನ ಹೊಸ ಯೋಜನೆಗಳು ವಿಶೇಷವಾಗಿ ಉಲ್ಲೇಖನೀಯ:

೧) **ಜೆಸ್ಸೂರ್** ಕೇಂದ್ರದಲ್ಲಿ (ಬಾಂಗ್ಲಾದೇಶ) ಹೊಸದಾಗಿ ನಿರ್ಮಿಸಲಾದ ಶ್ರೀ ರಾಮಕೃಷ್ಣ ಮಂದಿರದ ಉದ್ಘಾಟನೆ ನೆರವೇರಿತು. ೨) **ಫೀನಿಕ್ಸ್** (ದಕ್ಷಿಣ ಆಫ್ರಿಕಾ) ಕೇಂದ್ರವು ಅಲ್ಲಿನ ಇನಾಂದಾದಲ್ಲಿರುವ ಸಂತ್ರಸ್ತ ರೋಗಿಗಳಿಗೋಸ್ಕರ ಅಡುಗೆ ಮನೆ ಹಾಗೂ ಭೋಜನಾಲಯವನ್ನು ನಿರ್ಮಿಸಿಕೊಟ್ಟಿದೆ. ೩) **ಢಾಕಾ** (ಬಾಂಗ್ಲಾದೇಶ) ಕೇಂದ್ರವು ತನ್ನ ಶತಮಾನೋತ್ಸವವನ್ನು ನೆರವೇರಿಸಿತು; ಹಾಗೂ **ಸಿಂಗಾಪುರ** ಕೇಂದ್ರದ ಕಿಂಡರ್‌ಗಾರ್ಟನ್ ತನ್ನ ರಜತ ಮಹೋತ್ಸವವನ್ನು ನೆರವೇರಿಸಿತು.

ದೇಶದ ವಿವಿಧ ಭಾಗಗಳಲ್ಲಿ ಹಲವಾರು **ಪರಿಹಾರ ಮತ್ತು ಪುನರ್ವಸತಿ ನಿರ್ಮಾಣ** ಕಾರ್ಯಗಳನ್ನು ಹಮ್ಮಿಕೊಳ್ಳಲಾಯಿತು. ಸುಮಾರು ೪೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆದ ಈ ಕಾರ್ಯಗಳಿಂದ ೧೦.೫೩ ಲಕ್ಷ ಜನರು ನೆರವನ್ನು ಪಡೆದಿದ್ದಾರೆ.

ಈ ವರ್ಷದ ಅವಧಿಯಲ್ಲಿ ರಾಮಕೃಷ್ಣ ಮಿಷನ್ ಕೈಗೊಂಡ **ಸಮಾಜ ಕಲ್ಯಾಣ ಕಾರ್ಯಕ್ರಮಗಳ** ಅಡಿಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೃದ್ಧರಿಗೆ, ರೋಗಿಗಳಿಗೆ ಹಾಗೂ ನಿರ್ಗತಿಕರಿಗೆ ಆರ್ಥಿಕ ನೆರವು ಇತ್ಯಾದಿಗಳನ್ನು ನೀಡಲಾಯಿತು. ಇವುಗಳಿಗೆ ೧೭ ಕೋಟಿ ರೂಪಾಯಿಗಳು ವಿನಿಯೋಗವಾಗಿವೆ.

**ವೈದ್ಯಕೀಯ ಸೇವೆ**ಗಳನ್ನು ೭೨.೭೪ ಲಕ್ಷಕ್ಕಿಂತ ಹೆಚ್ಚು ಜನರಿಗೆ ೧೦ ಆಸ್ಪತ್ರೆಗಳು, ೮೦ ಚಿಕಿತ್ಸಾಲಯಗಳು, ೪೦ ಸಂಚಾರಿ ವೈದ್ಯಕೀಯ ಘಟಕಗಳು ಹಾಗೂ ೯೨೮ ವೈದ್ಯಕೀಯ ಶಿಬಿರಗಳ ಮೂಲಕ ನೀಡಲಾಯಿತು. ಇದಕ್ಕೆ ೨೨೭ ಕೋಟಿ ರೂಪಾಯಿಗಳನ್ನು ವ್ಯಯ ಮಾಡಲಾಗಿದೆ.

ಶಿಶುವಿಹಾರದಿಂದ ಹಿಡಿದು ವಿಶ್ವವಿದ್ಯಾಲಯದವರೆಗಿರುವ ನಮ್ಮ ವಿದ್ಯಾಸಂಸ್ಥೆಗಳಲ್ಲಿ, ಹಾಗೂ ಅಸಾಂಪ್ರದಾಯಿಕ ಶಿಕ್ಷಣ ವಿಭಾಗಗಳು, ರಾತ್ರಿ ಶಾಲೆಗಳು, ಖಾಸಗಿ ತರಗತಿಗಳು ಇತ್ಯಾದಿಗಳಲ್ಲಿ ಸುಮಾರು ೨.೩೧ ಲಕ್ಷ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದಾರೆ. ಈ **ಶೈಕ್ಷಣಿಕ ಕಾರ್ಯಕ್ರಮ**ಗಳಿಗೆ ಒಟ್ಟು ೩೨೪ ಕೋಟಿ ರೂಪಾಯಿಗಳು ವಿನಿಯೋಗವಾಗಿವೆ.

**ಗ್ರಾಮೀಣ ಹಾಗೂ ಬುಡಕಟ್ಟು ಜನಾಂಗದವರಿಗಾಗಿ** ನಡೆಸಿದ ಹಲವಾರು **ಅಭಿವೃದ್ಧಿ ಯೋಜನೆ**ಗಳಿಗೆ ೭೧ ಕೋಟಿ ರೂಪಾಯಿಗಳನ್ನು ವ್ಯಯ ಮಾಡಲಾಯಿತು. ಸುಮಾರು ೪೨.೮೬ ಲಕ್ಷ ಜನರು ಇದರ ಲಾಭ ಪಡೆದರು.

ಈ ಸಂದರ್ಭದಲ್ಲಿ ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಠದ ಎಲ್ಲ ಸೇವಾಕಾರ್ಯಗಳನ್ನು ಮುನ್ನಡೆಸಲು ನೆರವಾದ ಸಂಸ್ಥೆಯ ಎಲ್ಲ ಸದಸ್ಯರಿಗೂ, ಸ್ನೇಹಿತರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

(ಸ್ವಾಮಿ ಸುವೀರಾನಂದ)

೧೬ ಡಿಸೆಂಬರ್, ೨೦೧೮ — ಪ್ರಧಾನ ಕಾರ್ಯದರ್ಶಿ